# ವಾರ್ತಾವಿಶ್ಲೇಷಣೆ

## ಸ್ತ್ರೀಯರ ವೈಶಿಷ್ಟ್ಯ

**ನರಶಾಸ್ತ್ರಜ್ಞರ** ಪ್ರಕಾರ ಮಹಿಳೆಯರು ಪುರುಷರಿಗಿಂತ ಹೆಚ್ಚು ಬುದ್ಧಿವಂತರು. ಇತ್ತೀಚಿಗಿನ ಸಂಶೋಧನೆಗಳು ಈ ವಿಷಯವನ್ನು ಹೊರಪಡಿಸಿವೆ. ಯಾವುದೇ ಕಾರ್ಯದಲ್ಲಿ ನಿರತರಾಗಿರುವಾಗ ಮಹಿಳೆಯರ ಮಿದುಳಿನಲ್ಲಿರುವ ನ್ಯೂರಾನುಗಳು ಪುರುಷರದಕ್ಕಿಂತ ಹೆಚ್ಚು ವ್ಯಾಪಕವಾಗಿ ಕೆಲಸ ಮಾಡುವವಂತೆ. ಇದರಿಂದಾಗಿ ಅವರಿಗೆ ಏಕಕಾಲದಲ್ಲಿಯೇ ಅನೇಕ ವಿಷಯಗಳ ಕಡೆ ಗಮನ ಹರಿಸಲು ಸಾಧ್ಯವಾಗುತ್ತದೆ. ಇದೇ ಕಾರಣದಿಂದಾಗಿಯೇ ಅವರ ಜ್ಞಾಪಕಶಕ್ತಿ ಪುರುಷರಿಗಿಂತ ಅಧಿಕವಾದುದು. ಅಷ್ಟೇ ಅಲ್ಲದೆ, ವಯಸ್ಸಾದಂತೆಲ್ಲ ಪುರುಷರ ಮಿದುಳು ಮಹಿಳೆಯರದಕ್ಕಿಂತ ಬೇಗನೆ ಶಕ್ತಿಗುಂದುತ್ತದೆಯೆಂದು ಸಂಶೋಧನೆ ತಿಳಿಸುತ್ತದೆ. ಅರಳುಮರುಳು ಪುರುಷರೇ ಅಧಿಕ ಸಂಖ್ಯೆಯಲ್ಲಿರುವುದಕ್ಕೆ ಇದೇ ಕಾರಣವಿರಬೇಕು.

ಇಷ್ಟಾದರೂ ಸಮಾಜದಲ್ಲಿ ಪುರಷರದೇ ಮೇಲುಗೈ ಆಗಿರುವುದಕ್ಕೆ ಕಾರಣವೇನು? ಸ್ತ್ರೀ **'ಅಬಲೆ'** ಎನಿಸಿಕೊಳ್ಳುವುದಕ್ಕೆ ಕಾರಣವೇನು? ಮಕ್ಕಳನ್ನು ಹೆರುವುದು, ಅವುಗಳನ್ನು ನೋಡಿಕೊಳ್ಳುವುದು—ಇದರ ಕಡೆಗೇ ಆಕೆಯು ಹೆಚ್ಚು ಗಮನ ಹರಿಸಬೇಕಾಗಿದ್ದುದರಿಂದ ಬೇರೆ ಕಡೆ ತನ್ನ ಗಮನವನ್ನು ಹರಿಸುವುದಕ್ಕೆ ಹೆಚ್ಚು ಅವಕಾಶಗಳಿರಲಿಲ್ಲ. ಇದರ ಪ್ರಯೋಜನವನ್ನು ಪಡೆದುಕೊಂಡ ಪುರುಷನು ಸಮಾಜದಲ್ಲಿ ಪ್ರಾಮುಖ್ಯವನ್ನು ಪಡೆಯಲು ಸಾಧ್ಯವಾಯಿತು. ಮಹಿಳೆಯು ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ಉಳಿಯಬೇಕಾದ ಪರಿಸ್ಥಿತಿ ಒದಗಿ ಬಂತು. ಪತ್ನಿ ಗೃಹಮಂತ್ರಿಯಾಗಿಯೂ ಪತಿ ವಿದೇಶಮಂತ್ರಿಯಾಗಿಯೂ ಬಾಳಬೇಕಾದ ಪ್ರಸಂಗ ಬಂದೊದಗಿತು.

ಆದರೆ ಈಗ ಪರಿಸ್ಥಿತಿ ಬದಲಾಗಿದ್ದರೂ ಪರಾಧೀನ ಮನೋಭಾವ ಮಹಿಳೆಯರನ್ನು ಇನ್ನೂ ಬಿಟ್ಟಿಲ್ಲ. ಶೇಕಡ ೫೦ರಷ್ಟು ಮಹಿಳೆಯರು ಉನ್ನತ ಹುದ್ದೆಗೆ ಅರ್ಹತೆಯಿದ್ದರೂ ಅದನ್ನು ಪಡೆಯುವುದಕ್ಕೆ ಇಷ್ಟಪಡುವುದಿಲ್ಲವಂತೆ. ಕೆಳಗಿನ ಹುದ್ದೆಗಳಲ್ಲಿಯೇ ಅವರು ತೃಪ್ತರಾಗುತ್ತಾರೆ. ಸಹಸ್ರಾರು ವರ್ಷಗಳಿಂದ ಪುರುಷರಿಗೆ ಅಧೀನರಾಗಿ ಬಾಳಿದ ಅವರ ಸಾಮೂಹಿಕ ಅಪ್ರಜ್ಞೆಯಲ್ಲಿಯೇ ಪರಾಧೀನತೆ ಸೇರಿಕೊಂಡುಹೋಗಿರಬೇಕು. ಈ ದೀನಭಾವವನ್ನು ಅವರು ಮೀರಿಹೋಗಿ ತಮ್ಮ ಹಿರಿಮೆಯನ್ನು ಮೆರೆಯಬೇಕು. ಸ್ತ್ರೀ-ಪುರುಷರಲ್ಲಿ ಎಷ್ಟೇ ಅಸಮಾನತೆಯಿದ್ದರೂ ಆಧ್ಯಾತ್ಮಿಕ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಸಮಾನತೆಯ ಭಾವವನ್ನು ಬೆಳೆಸಿಕೊಂಡಾಗ ಪರಸ್ಪರ ಪ್ರಲೋಭನೆಗೆ ಒಳಗಾಗದೆ ಸ್ತ್ರೀ-ಪುರುಷರು ಕಲೆತು ಬಾಳುವುದಕ್ಕೆ ಸಾಧ್ಯವಾಗುತ್ತದೆ.

## ಮಿದುಳು ದಶಕ

**ಕಳೆದ ಹತ್ತು ವರ್ಷಗಳನ್ನು ಮಿದುಳು ದಶಕ** ಎಂದು ಕರೆಯಲಾಗಿದೆ. ಈ ಅವಧಿಯಲ್ಲಿ ಮಿದುಳಿಗೆ ಸಂಬಂಧಿಸಿದಂತೆ ಅಪೂರ್ವ ಸಂಶೋಧನೆಗಳು ನಡೆದುವು. ಪ್ರಜ್ಞೆ ಎಂದರೇನು, ಅದು ಇರುವುದೆ, ಅದು ದ್ರವ್ಯಕ್ಕಿಂತ ಪ್ರತ್ಯೇಕವಾದುದೆ ಅಥವಾ ದ್ರವ್ಯದ ಆವಿರ್ಭಾವವೆ—ಇವೇ ಮುಂತಾದ ಪ್ರಶ್ನೆಗಳು ಪುರಾತನವಾದರೂ ನಿತ್ಯನೂತನವಾದುವುಗಳು. ಅನೇಕ ಶತಮಾನಗಳಿಂದ ವಿಜ್ಞಾನಿಗಳು ಪ್ರಜ್ಞೆಗೆ (consciousness) ಸಂಬಂಧಿಸಿದ ಪ್ರಶ್ನೆಗಳನ್ನು ಸಂಪೂರ್ಣ ಕಡೆಗಣಿಸಿದ್ದರೆಂದೇ ಹೇಳಬಹುದು. ಆದರೆ ಈಗ ಮತ್ತೆ ಈ ಪ್ರಶ್ನೆಗಳು ವೈಜ್ಞಾನಿಕ ವಲಯದಲ್ಲಿ ಪುನಶ್ಚೇತನ ಪಡೆದಿವೆ—ಚೈತನ್ಯ ಈಗ ಮತ್ತೆ ಚೇತರಿಸಿಕೊಳ್ಳುತ್ತಿದೆ!

ಜೈವಿಕ ಕಂಪ್ಯೂಟರ್ ಎನಿಸಿಕೊಂಡಿರುವ ಈ ಮಾನವ ಮಿದುಳು ಜಗತ್ತಿನಲ್ಲೇ ಅತ್ಯಂತ ರಹಸ್ಯಾತ್ಮಕ ವಸ್ತು ಎಂದು ಪರಿಗಣಿಸಲಾಗಿದೆ. ಅದರ ಬಗೆಗಿನ ಸಂಶೋಧನೆಗಳು ಅದನ್ನು ಇನ್ನೂ ರಹಸ್ಯಾತ್ಮಕ ಗೊಳಿಸುತ್ತಿದೆ. ಅಮೆರಿಕದ ಫೆಡರಲ್ ಕಂಪ್ಯೂಟರ್‌ಗಳೆಲ್ಲದರ ಒಟ್ಟು ಸ್ಮೃತಿಶಕ್ತಿ ೧,೦೦೦,೦೦೦ ಬಿಲಿಯನ್ ಮಾಹಿತಿ ಬಿಟ್‌ಗಳು. ಇದಕ್ಕೆ ಹೋಲಿಸಿದರೆ ಒಂದು ಮಾನವ ಮಿದುಳಿನ ಶಕ್ತಿಯೇ ೧೦೦೦ ಬಿಲಿಯನ್ ಬಿಟ್‌ಗಳಂತೆ! ಈ ಅದ್ಭುತ ಯಂತ್ರ ಕೇವಲ ಯಂತ್ರವೆ ಅಥವಾ ಅದರ ಹಿಂದೆ ಪ್ರಜ್ಞೆ ಇದೆಯೆ?

ಫ್ರಾಂಸಿಸ್ ಕ್ರಿಕ್ ಎಂಬ ವಿಜ್ಞಾನಿ ಹೇಳುತ್ತಾರೆ: "ನೀವು", ನಿಮ್ಮ ಸುಖ ದುಃಖಗಳು, ನಿಮ್ಮ ನೆನಪುಗಳು, ನಿಮ್ಮ ಮಹತ್ವಾಕಾಂಕ್ಷೆಗಳು, ನಿಮ್ಮ ವ್ಯಕ್ತಿಪ್ರಜ್ಞೆ, ನಿಮ್ಮ ಇಚ್ಛಾಶಕ್ತಿ—ಇವೆಲ್ಲವೂ ಅಸಂಖ್ಯ ನರಜೀವಕೋಶಗಳು ಮತ್ತು ಅವುಗಳಿಗೆ ಸಂಬಂಧಿಸಿದ ಸೂಕ್ಷ್ಮಾಣುಗಳ ವರ್ತನೆಗಳಲ್ಲದೆ ಮತ್ತೇನಲ್ಲ. ಆದರೂ ಇವುಗಳೆಲ್ಲದರ ಹಿಂದೆ ಇರುವ **"ನಾನು"** ಎಂಬ ಪ್ರಜ್ಞೆ ಇವುಗಳಿಂದ ಪ್ರತ್ಯೇಕವಾದುದು ಎಂಬುದು ಹಲವು ವಿಜ್ಞಾನಿಗಳ ಅಭಿಪ್ರಾಯ. "ಜಗತ್ತಿನ ಭೌತಿಕರಚನೆ, ಕಣಗಳ ನಿರ್ದಿಷ್ಟ ಹರಹು, ದೇಶ-ಕಾಲಗಳಲ್ಲಿನ ಕ್ಷೇತ್ರ ಮತ್ತು ಶಕ್ತಿಗಳು— ಇವೆಲ್ಲವನ್ನೂ ಪ್ರಜ್ಞಾಸಹಾಯವಿಲ್ಲದೆಯೇ ತರ್ಕಬದ್ಧವಾಗಿ ವಿವರಿಸಬಹುದು. ಪ್ರಜ್ಞೆಯ ಇರುವಿಕೆ ನಮ್ಮ ಜಗತ್ತಿನಲ್ಲಿ ಇವುಗಳನ್ನು ಮೀರಿದ ಒಂದು ವಿಶಿಷ್ಟಾಂಶ" ಎಂದು **ಡೇವಿಡ್ ಚಾಲ್ಮರ್ಸ್** ಹೇಳುತ್ತಾರೆ. ಆದರೆ ಈ ವಿಶಿಷ್ಟ ಪ್ರಜ್ಞೆಯು ಮಾನವನ ತಲೆಯಲ್ಲಿ ಮಾತ್ರ ಅಡಗಿಕೊಂಡಿದೆ ಎನ್ನುವುದು ಅಸಂಬದ್ಧ ಎಂದು ಕೆಲವು ವಿಜ್ಞಾನಿಗಳು ಅಭಿಪ್ರಾಯ ಪಡುತ್ತಾರೆ. ಅವರ ಪ್ರಕಾರ ಈ ಪ್ರಜ್ಞೆಯು ಹೇಗೊ ಭೌತಿಕ ಜಗತ್ತನ್ನು ಆವರಿಸಿಕೊಂಡಿರಬೇಕು. ಹೀಗೆ ಮತ್ತೆ **"ಈಶಾವಾಸ್ಯಮಿದಂ ಸರ್ವಂ"** ಎಂದು ಸಾರಿದ ಉಪನಿಷತ್ತಿನ ಕಾಲಕ್ಕೇ ಹಿಂದಿರುಗುತ್ತಿದ್ದೇವೆ.